ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂಃಸಾಗ್ರಂಇ/ಎಸ್.ಸಿ.ಪಿ-ಟಿ.ಎಸ್.ಪಿ/ಪು.ಖ/34/2017ಪ್ರ/
6394

ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ,
ಬೆಂಗಳೂರು-560 001,
ದಿನಾಂಕ: 14-12-2017
email:dpl_dir_acts@yahoo.co.in

ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ವಾರ್ತಾ ಭವನ, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು

ಮಾನ್ಯರೆ,

ವಿಷಯ:- ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2017 ಆಕ್ಟೋಬರ್ ರಿಂದ ಡಿಸೆಂಬರ್ ರವರೆಗೆ ಪ್ರಥಮವಾಗಿ ಪ್ರಕಟಣೆಯಾದ ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ 2017ರ ಆಕ್ಟೋಬರ್ ರಿಂದ ಡಿಸೆಂಬರ್ ರವರಗೆ ಪ್ರಥಮವಾಗಿ ಮುದ್ರಣಗೊಂಡು ಪ್ರಕಟವಾದ ಪರಾಮರ್ಶನ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ ಹಾಗೂ ಮಕ್ಕಳ ಪುಸ್ತಕ, ವಿಶ್ವಕೋಶಗಳು, ಕಾನೂನು, ವಿಜ್ಞಾನ, ತಂತ್ರಜ್ಞಾನ ಹಾಗೂ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕನ್ನಡ ಪುಸ್ತಕಗಳನ್ನು ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಖರೀದಿಸುವ ಕುರಿತು ವಿವಿಧ ಲೇಖಕ ಪ್ರಕಾಶಕರಿಂದ/ಪ್ರಕಟಣ ಸಂಸ್ಥೆಗಳು/ಸರಬರಾಜುದಾರರಿಂದ ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸಲು ಪ್ರಕಟಣೆಯನ್ನು ಹೊರಡಿಸಲಾಗಿವೆ.

ಸದರಿ ಯೋಜನೆಯು ಸರ್ಕಾರದ ವಿಶೇಷ ಯೋಜನೆಯಾಗಿರುವುದರಿಂದ ಪ್ರಕಟಣೆಯನ್ನು ರಾಜ್ಯಾದ್ಯಂತ ಹೆಚ್ಚು ಪ್ರಸಾರವುಳ್ಳ ಕನ್ನಡ ಮತ್ತು ಆಂಗ್ಲಭಾಷಾ ದೈನಂದಿನ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಈ ಮೂಲಕ ಕೋರುತ್ತೇನೆ. ಪ್ರಕಟಣೆಯ ಪ್ರತಿಗಳನ್ನು ಈ ಪತ್ರದ ಜೊತೆ ಲಗತ್ತಿಸಿದೆ.

ಸದರಿ ಪ್ರಕಟಣೆಯ ವೆಚ್ಚವನ್ನು ಇಲಾಖೆಯು ಭರಿಸಲಿದ್ದು, ಪ್ರಕಟವಾದ ಬಗ್ಗೆ ಪ್ರಕಟಿತ ದೈನಂದಿನ ದಿನಪತ್ರಿಕೆಗಳನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

ವಂದನೆಗಳೊಂದಿಗೆ,

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ,
ಬೆಂಗಳೂರು.

ನಾ: SCP-TSP (Book List) Ten Not/Paper Noti.

21/12/17 ..............ರಂದು ರವಾನಿಸಿದೆ

(

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಗ್ರಂಥಾಲಯ ಇಲಾಖೆ**

ಸಂ.ಸಾಗ್ರಂಇ/ನಿಕ/ಯೋವಿ/ಎಸ್‌ಸಿಪಿ–ಟಿಎಸ್‌ಪಿ/2017ಪ್ರ/2017–18

ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ
4ನೇ ಮಹಡಿ, ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು–560 001,
ದಿನಾಂಕ: 14–12–2017

: ಪ್ರಕಟಣೆ :

ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ (ಎಸ್‌ಸಿಪಿ/ಟಿಎಸ್‌ಪಿ) ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ (ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2017 ಆಕ್ಟೋಬರ್ ರಿಂದ ಡಿಸೆಂಬರ್‌ರವರೆಗೆ ಪ್ರಥಮವಾಗಿ ಮುದ್ರಣಗೊಂಡು ಪ್ರಕಟಣೆಯಾದ ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

*****

2017–18ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಯೋಜನೆಯಡಿಯಲ್ಲಿ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ (ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2017 ಆಕ್ಟೋಬರ್ ರಿಂದ ಡಿಸೆಂಬರ್ ರಲ್ಲಿ ಪ್ರಥಮವಾಗಿ ಮುದ್ರಣಗೊಂಡು ಪ್ರಕಟಣೆಯಾದ ಪರಾಮರ್ಶನ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ ಹಾಗೂ ಮಕ್ಕಳ ಪುಸ್ತಕ, ವಿಶ್ವಕೋಶಗಳು, ಕಾನೂನು, ವಿಜ್ಞಾನ, ತಂತ್ರಜ್ಞಾನ ಹಾಗೂ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕನ್ನಡ ಮತ್ತು ಆಂಗ್ಲ ಭಾಷಾ ಪುಸ್ತಕಗಳನ್ನು ಖರೀದಿಸಲು ಲೇಖಕ, ಲೇಖಕ–ಪ್ರಕಾಶಕ, ಪ್ರಕಟಣ ಸಂಸ್ಥೆಗಳು ಹಾಗೂ ವಿತರಕರಿಂದ ಪುಸ್ತಕಗಳನ್ನು :31–12–2017 ರ ಒಳಗಾಗಿ ಆಯ್ಕೆಗಾಗಿ ಸಲ್ಲಿಸಲ ಈ ಮೂಲಕ ತಿಳಿಸಿದೆ

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ,
ಬೆಂಗಳೂರು.

ನಾ: SCP-TSP (Book List) Ten Not/Paper Noti.